ಸ್ಪಷ್ಟವಾಗಿ ನೆನಪಿದೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಮಿಕ್ಕಿದ್ದೆಲ್ಲಾ ನಿನ್ನ ಹಣೆ ಬರಹ, ನೀನು ಪಡೆದು ಬಂದಿದ್ದು ಇಷ್ಟೇ ಈ ಜನ್ಮಕ್ಕೆ...' ಮತ್ತೆ ಅವಳು ಮನೆಗೆ ಬರಲೇ ಇಲ್ಲ. ಆಗಿನ ಪುಟ್ಟ ಮನಸ್ಸಿಗೆ ಅಳಿಸಲಾಗದ ಘಾತವನ್ನು ಮಾಡಿತ್ತು.

'... ಮುಂಡೆ' ಎಂಬ ಬೈಗುಳವು ಚೆನ್ನಿಗರಾಯ ಹಾಗೂ ಅಪ್ಪಣ್ಣಯ್ಯನ ಬಾಯಿಂದ ಬರುವುದು ಎಷ್ಟು ಸಹಜವೋ ಗಂಡಸೊಬ್ಬ ಮನೆಯ ಹೆಣ್ಣು ಮಗಳನ್ನು ಜಾಡಿಸಿ ಒದೆಯುವುದು ಅಷ್ಟೇ ಸಾಧಾರಣವೆಂದು ಎಣಿಸಿ ಅಡುಗೆ ಮನೆಗೆ ಹೋಗಿ ಕಣ್ಣೀರು ಹಾಕಿ ಸುಮ್ಮನಾಗುವುದು ಅಸಹಜವಾಗಿ ಕಂಡರೂ ಅದು ಅಂದಿನ ಪ್ರಸ್ತುತ. ಅದು ನಂಜಮ್ಮನ 'ಹಣೆಬರಹ'. ತಾನೂ ಹೆಣ್ಣೇ ಆದ ಗಂಗಮ್ಮ, 'ಶಾನುಭೋಗಿಕೆ ಮಾಡ್ತಾ ಮೆರಿತಾಳಂತೆ ಕಣೋ ನಿನ್ನ ಹೆಂಡ್ತಿ ಮುಂಡೆ, ಅವಳನ್ನ ಹದ್ದುಬಸ್ತಿನಲ್ಲಿಡು...' ಎಂದು ತನ್ನ ಅಯೋಗ್ಯ ಮಗನಿಗೆ ಹೇಳಿಕೊಡುವಾಗ ಪೂರ್ವಗ್ರಹ ವ್ಯವಸ್ಥೆಯ ಎರಡನೇ ದರ್ಜೆಯ ಪ್ರಜೆಯಾಗಿ ಅವಳೂ ಸಹ ಬಲಿಪಶುವಾಗಿರುವುದು ಖಚಿತವಾಗುತ್ತದೆ. ಅವಳು ಮಾತನಾಡುವ, ಬೈಯುವ ಪರಿ ಆಗ ಸಿಟ್ಟು ತರಿಸುತ್ತಿತ್ತು, ಈಗ ನಗು ತರಿಸುತ್ತದೆ. ಮಕ್ಕಳು ನಾವು ಮಾಡುವುದನ್ನು ಮಾಡುತ್ತಾರೆಯೇ ವಿನಃ ಹೇಳುವುದನ್ನಲ್ಲ ಎಂಬ ಮಾತು ಈ ಪಾತ್ರದ ಮುಖಾಂತರ ಜೀವಂತ. ತನ್ನ ಗಂಡ ಸತ್ತಾಗ ಅವಳೇ ಕೈಗೆತ್ತಿಕೊಂಡು ನಿಭಾಯಿಸಬಹುದಾಗಿದ್ದ ಎಲ್ಲ ವಹಿವಾಟನ್ನು ಅವಳೇ ಖುದ್ದು ನಿಂತು ಬೇರೆಯವರ ಪಾಲು ಮಾಡುವ ದೃಶ್ಯ ಸಾಮಾಜಿಕ ವ್ಯವಸ್ಥೆಯ ಪರಿಣಾಮವಾಗಿ ಹೆಣ್ಣು ಬಲಿಪಶುವಾಗುವ ಸಾಕ್ಷೀಕರಣ. ಸರ್ಕಾರಿ ಕಾಗದಪತ್ರಗಳನ್ನು ಹೆಣ್ಣು ಮಕ್ಕಳು ಮುಟ್ಟಿದರೆ ಪೋಲೀಸರು ಹಿಡಿದುಕೊಂಡು ಹೋಗುತ್ತಾರಂತೆ ಎಂಬ ಮಾತು ಇದರ ಉದ್ಧರಣ. ಶಿವಲಿಂಗೇಗೌಡ, ಅಯ್ಯಾಶಾಸ್ತ್ರಿ ಮುಂತಾದವರ ಸಂಚಿಗೆ ತಾನೇ ಬಲಿಯಾಗುವ ಅವಳ ಬಗ್ಗೆ ಕನಿಕರ ಮೂಡುವುದು. ವಿಧವೆಯೊಬ್ಬಳು ಇರಬೇಕಾದಂತೆ ಕಟ್ಟುನಿಟ್ಟಾಗಿ ಇರುವ ಆಕೆ, ಸೊಸೆಯನ್ನು ಸಮಾಜದ ಬಳುವಳಿಯಾಗಿ ಬಂದ ದೃಷ್ಟಿಯಲ್ಲೇ ಕಡೆಯವರೆಗೂ ನೋಡುವಾಗ ನಂಜುವಿನ ಅಜ್ಜಿ ಅಕ್ಕಮ್ಮ ಅವಳೆದುರು ಒಂದು ಕೈ ಹೆಚ್ಚೇ ಸಮರ್ಥವಾದ ವ್ಯತಿರಿಕ್ತ ಪಾತ್ರವಾಗುವಳು.

ತಕ್ಕಮಟ್ಟಿಗೆ ಸ್ವಂತಿಕೆ ಇರುವ ನಂಜು, ಕಲ್ಲೇಶಿ ಹಾಗೂ ಕಮಲು ನಡುವಿನ ಮನಸ್ತಾಪದ ಹೊತ್ತಲ್ಲಿ ತೋರುವ ಬೌದ್ಧಿಕ ಸಂತುಲನ ಹಾಗೂ ಚೆನ್ನಿಗರಾಯನ ನಿಜರೂಪ ತಿಳಿದ ಮೇಲೂ ಮತ್ತೆ ಮತ್ತೆ ಅವಳು ಬಸುರಾದಾಗ ಹೇಳಿಕೊಳ್ಳುವ ಮಾತಿನಿಂದ ಕಾದಂಬರಿಯ ಎಲ್ಲಾ ಸ್ತ್ರೀ ಪಾತ್ರಗಳಿಂದ ಭಿನ್ನವಾಗಿ ನಿಲ್ಲುತ್ತಾಳೆ. ಸಾಕಲಾಗದ ಸ್ಥಿತಿಯಲ್ಲಿ ಮೇಲೆ ಮೇಲೆ ಮಕ್ಕಳಾದರೂ, 'ದೇವರು ಕೊಟ್ಟಾಗ ಬೇಡ ಅನ್ನಲಾದಿತೇ' ಎಂಬಂತಹ ಮಾತುಗಳನ್ನು ಖುದ್ದು ಕೇಳಿದ್ದ ನನಗೆ ಕಾದಂಬರಿಯಲ್ಲಿ ಓದಿದ ಮೇಲಂತೂ ಮದುವೆ ಮಕ್ಕಳು ಎಂಬ ವಿಚಾರವೇ ರೇಜಿಗೆ ಹುಟ್ಟಿಸಿತ್ತು. ಪ್ರವಾಹದ ದಿಕ್ಕಿಗೆ ಈಜುತ್ತಾ ಮುಳುಗದೇ ಉಸಿರು ಉಳಿಸಿಕೊಳ್ಳುವ ಅವಳ ಜಾಣ್ಮೆ, ತುಂಬಾ ಹಿಡಿಸುತ್ತದೆ. ಪದೇಪದೇ ಕಾಣಿಸಿಕೊಳ್ಳುವ ಪ್ಲೇಗು, ಅವಳ ಬದುಕಿಗೆ ಎರಗಬಹುದಾದ ಯಾವುದೇ ಅವಘಡದ ಚಿತ್ರಣವಾಗಷ್ಟೇ ಉಳಿದರೂ ಪ್ರತಿ ಬಾರಿ ಪ್ಲೇಗು ಅವಳ ಬದುಕು ಹೈರಾಣು ಮಾಡಿದಾಗಲೂ ಅವಳ ಸ್ಥೈರಣೆ ಹಾಗೂ ಸಾಮರ್ಥ್ಯ ಹೆಚ್ಚುತ್ತದೆಯೇ ಹೊರತು ಕುಗ್ಗುವುದಿಲ್ಲ. ಅದಲ್ಲದೆಯೂ ಅವಳ ನೋವಿಗೆ ಬೇಕಾದಷ್ಟು ಕಾರಣಗಳಿವೆ. ಮುಖ್ಯವಾಗಿ ಚೆನ್ನಿಗರಾಯ. ಒಳ್ಳೆಯ ಊಟ, ಹಣ್ಣು, ತಾಂಬೂಲ, ತಂಬಾಕುಗಳಿಗೆ ಬದುಕನ್ನೇ ಮುಡಿಪು ಮಾಡಿಬಿಡಬಲ್ಲ ಬುದ್ಧಿಹೀನ ಪಾತ್ರ ನನಗಂತೂ ಎಷ್ಟು ಅಸಹನೆ ಮೂಡಿಸಿತ್ತು! ವಾರಗಿತ್ತಿ ಸಾತುವಿಗೂ ನಂಜಮ್ಮಳಿಗೂ ಅಜಗಜಾಂತರ ವ್ಯತ್ಯಾಸ! ಒಂದೇ ಮಾತಿನಲ್ಲಿ ಗಂಡನ ಮನೆಗೆ ಬರುತ್ತಲೇ ಅಪ್ಪಣ್ಣಯ್ಯನನ್ನು ಹೆಡೆಮುರಿಗೆ ಕಟ್ಟುವ ಸಾತು ಒಂದೆಡೆ, ಜೀವಮಾನದುದ್ದಕ್ಕೂ ಚನ್ನಿಗರಾಯನನ್ನು ಹೇಗಿದ್ದನೋ ಹಾಗೆಯೇ ಬಿಟ್ಟು ಅವನಂತೆ ತಾನು ಬದುಕಿ, ಪಡಬಾರದ ಎಲ್ಲಾ ಪಡಿಪಾಟಲನ್ನು ತಾನೊಬ್ಬಳೇ ಪಟ್ಟು ಬೆಂಕಿಯನ್ನು ನುಂಗಿ ಬದುಕುವ ನಂಜಮ್ಮ ಮತ್ತೊಂದೆಡೆ.

ನಂಜಮ್ಮ ಇಲ್ಲಿ ಕೇವಲ ಒಂದು ಪಾತ್ರವಾಗಿ ಮಾತ್ರ ನಿಲ್ಲುವುದಿಲ್ಲ. ಒಂದು ಕಾಲಘಟ್ಟದ ಸಮಸ್ತ ಹೆಣ್ಣು ಮಕ್ಕಳ ಪ್ರತಿನಿಧಿಯಾಗಿ, ಒಂದು ಪ್ರತಿಮೆಯಾಗಿ ನಿಲ್ಲುತ್ತಾಳೆ. ಪುಂಡಾಟಿಕೆಯ ಗಂಡನನ್ನು ಹೆಮ್ಮಾರಿತನವನ್ನು ಮೈವೆತ್ತ ಅತ್ತೆ ಹಾಗೂ ಪಡಪೋಷಿ ಮೈದುನನನ್ನು ಸಹಿಸಲಾರದೆ ಇವಳು ಎಂದೂ ಮುಖ